ಕಥೆ

# ಮನೆ



**ಚೀಮನಹಳ್ಳಿ ರಮೇಶಬಾಬು**

ಕಲೆ: ಮುರಳೀಧರ್ ರಾಥೋಡ್

ಕಡು ಬೇಸಿಗೆ. ನೊಣಗಳ ಹಾವಳಿ ಜೋರಾಗಿಯೆ ಇತ್ತು. ಮನೆಗಳ ಮುಂದೆ, ಹಿತ್ತಲು, ರಸ್ತೆಯ ಮೇಲೆ, ಚರಂಡಿ, ತಿಪ್ಪೆ, ತೋಟ, ಹೀಗೆ ಎಲ್ಲೆಂದರಲ್ಲಿ ಮಾವಿನ ವಾಟೆ ಮತ್ತು ಸಿಪ್ಪೆಗಳು ರಸವತ್ತಾಗಿ ಚದುರಿಕೊಂಡಿದ್ದವು. ಅವುಗಳ ಮೇಲೆ ನೊಣಗಳ ಸಂಭ್ರಮ ಕಣ್ಣಿಗೆ ರಾಚುವಂತೆ ಕಾಣುತ್ತಲಿತ್ತು. ತೆಳುವಾಗಿ ಹರಡಿಕೊಂಡಿರುವ ಏರೋಪ್ಲೇನ್ ಚಿಟ್ಟೆಗಳ ಹಾರಾಟ ಕಣ್ಣಿಗೆ ಹಿತ ನೀಡುವಂತಿದ್ದರೆ ನೊಣಗಳ ಸಂಭ್ರಮ ರೇಜಿಗೆ ಹುಟ್ಟಿಸುವಂತೆ ತೆರೆದುಕೊಂಡಿತ್ತು. ಹಲವು ಮನೆಗಳ ಅಂಗಳದಲ್ಲಿ ನೊಣಗಳಿಂದ ಮುಕ್ತಿ ಪಡೆಯಲು ನಸುಗೆಂಪು ಬಣ್ಣದ ರಾಗಿಕಾಳುಗಳಂತಹ ಔಷಧವನ್ನು ಚೆಲ್ಲಲಾಗಿತ್ತು. ಶ್ರೀನಿವಾಸಪುರ ಪಟ್ಟಣದಿಂದ ತುಸು ದೂರದಲ್ಲೆ ಇರುವ ಕಲ್ಲೂರು ಎಂಬ ಹೆಸರಿನ ಆ ಸಣ್ಣ ಊರಿನ ನಡುವಿಗಿರುವ ಆ ಹಳೆಯ ಮನೆ ಬಿಸಿಲಿಗೆ ತೆರೆದುಕೊಂಡು ಹೊಳೆಯುತ್ತಲಿತ್ತು. ಮನೆಯ ಪಡಸಾಲೆಯಲ್ಲಿರುವ ಮರದ ದಿವಾನಾದ ಮೇಲೆ ಸಾವನ್ನು ಎದುರು ನೋಡುತ್ತಾ ಮಲಗಿರುವ ರಂಗಜ್ಜಿಯ ಕಣ್ಣಂಚು, ಬಾಯಿ ಮತ್ತು ಮೂಗಿನ ಹೊಳ್ಳೆಗಳ ಮೇಲೆಯೂ ನೊಣಗಳ ಸಂಭ್ರಮ ಮುಂದುವರೆದಿತ್ತು. ಅವಳು ಒಂದೆರಡು ಬಾರಿ ಓಡಿಸಲು ಪ್ರಯತ್ನಿಸಿದಳು. ಅವು ಮೇಲೆ ಹಾರಿ ಮತ್ತೆ ಅದೇ ಜಾಗದಲ್ಲಿ ಮೆತ್ತಿಕೊಳ್ಳುತ್ತಿದ್ದವು. ಹಲವು ಬಾರಿ ಓಡಿಸಲು ಪ್ರಯತ್ನಿಸಿ ಸೋತ ಅವಳು 'ಲೇ ಬಾಸ್ಕರ... ಕಾಟಮು ಕೊಡ್ತಾವೆ. ವಸಿ ವೋಡಿಸ್ಲ' ಎಂದು ಶಕ್ತಿಯನ್ನೆಲ್ಲಾ ಒಟ್ಟುಗೂಡಿಸಿ ಕೂಗಿದಳು. ಅವನು ಒಳಗಿನಿಂದಲೆ 'ಒಳ್ಳೆ ನಸಾಯ್ತಲ್ಲ ನಿಂದು. ನಮುಕೇನು ಬೇರೆ ಪಂಗಿಲ್ಲ' ಅನ್ಕೊಂಡ. 'ಟೌನಾಗ ಕ್ರಿಕೆಟ್ ಟೂರ್ನಮೆಂಟ್ ನಡೀತಿದೆ. ಉಣ್ಕಂಡು ಅಲ್ಲೋಗ್ಬೇಕು. ಬೇಕಾರೆ ಇವಳ್ನ ಕರ್ಕೋ... ಯೆಂಗೂ ಮನೇಲೆ ಬಿದ್ದಿರ್ತಾಳೆ. ಮತ್ತೇನ್ ಪಂಗಿದೆ ಇವುಳ್ಕೆ' ಎಂದು ನುಡಿದು ತಂಗಿ ಕುಸುಮಳ ಕಡೆಗೆ ಬೊಟ್ಟುಮಾಡಿದ. ಅವಳು ಇದು ಯಾವಾಗಲೂ ಇದ್ದದ್ದೆ ಎಂದುಕೊಳ್ಳುತ್ತಾ ಮೇಲೆ ಎದ್ದಳು. ಅಷ್ಟರಲ್ಲಿ ಭಾಸ್ಕರ ಮತ್ತು ಕುಸುಮಳ ತಾಯಿ ಸುಶೀಲಮ್ಮ 'ಲೇ ತಿರಬೋಕಿ ನನ್ಮಗನೆ... ಎದ್ದು ಅವುರ್ಕೆ ಏನೊ ನೋಡೋಗು. ನಿಂಕೇಳಿದ್ರೆ ನೀ ಇನ್ನೊಬ್ರಿಗೆ ಯೇಳ್ತೀಯಲ್ಲ. ಎಲ್ಲಾ ಅಪ್ಪನ ಬುದ್ದಿ' ಎಂದು ರೇಗಿದಳು. ಕುಸುಮ ನೊಣಗಳ ಮದ್ದಿನ ಡಬ್ಬಿಯನ್ನು ಕೈಯಲ್ಲಿ ಹಿಡಿದು ಆಚೆ ನಡೆದಳು. ಭಾಸ್ಕರ ಬ್ಯಾಟನ್ನು ಹಿಡಿದು 'ಇಲ್ಲೆ ಇದ್ರೆ ನನ್ ಕೈನಾಗೆ ಮನೆ ಚಾಕರಿ ಮಾಡಿಸ್ತೀರ ನೀವು. ನಾ ಆಚೆ ಟೌನಾಗ ಏನಾರ ಉಣ್ಕತೀನಿ' ಎಂದು ನುಡಿಯುತ್ತಾ ಹೆಜ್ಜೆ ಇಟ್ಟ.

ಭಾಸ್ಕರ ಪಡಸಾಲೆಗೆ ಬರುವಷ್ಟರಲ್ಲಿ ಕುಸುಮ ಮದ್ದನ್ನು ಕೈಯಲ್ಲಿ ಹಿಡಿದು ರಾಗಿಕಾಳುಗಳಂತೆಯೆ ಚೆಲ್ಲುತ್ತಲಿದ್ದಳು. ಅವು ಹರಳಿನಂತೆ ಹೊಳೆಯುತ್ತಾ ಉರುಳಿ ಒಂದು ಕಡೆ ನಿಂತು ನೊಣಗಳ ಬರುವಿಗಾಗಿ ಕಾಯುವಂತೆ ಕಣ್ಣು ಬಿಟ್ಟುಕೊಂಡವು. ಅವನು 'ಆ